೧೪ ಬೈಂದೂರಿನ ಬಳಿ ಬಿಜೂರು ಗ್ರಾಮದ ಪರಿಶಿಷ್ಟ ವರ್ಗಕ್ಕೆ ಸೇರಿದ ರೈತನ ಮೇಲೆ ಹಲ್ಲೆ.

೧–೦೦ ಪಿ. ಎಂ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನ ಬಳಿಯ ಬಿಜೂರು ಗ್ರಾಮದಲ್ಲಿ ಪರಿಶಿಷ್ಟವರ್ಗಕ್ಕೆ ಸೇರಿದ ಕೊರಗ ಜನಾಂಗದ ದುರ್ಬಲ ರೈತನೊಬ್ಬನ ಗೇರು ತೋಟಕ್ಕೆ ಪ್ರವೇಶಿಸಿ ಅಕ್ರಮವಾಗಿ ಗೇರು ಬೀಜವನ್ನು ಕೆಲವರು ತೆಗೆದರೆಂದೂ ಆತ ಪ್ರಶ್ನಿಭಟಿಸಿದಾಗ, ಸುಮಾರು ಮೂರು ದಿನಗಳ ಹಿಂದೆ ಆತನನ್ನು ಸುಮಾರು ೧೮ ಜನ ಮೇಲ್ವರ್ಗದವರು ಸೇರಿ ಕಂಬಕ್ಕೆ ಕಟ್ಟಿ ಅಮಾನುಷವಾಗಿ ಹಲ್ಲೆ ಮಾಡಿದರೆಂದೂ ಆರಕ್ಷಕ ಹಾಗೂ ಕಂದಾಯ ಇಲಾಖೆಯವರು ಬಡ ದಲಿತರಿಗೆ ನ್ಯಾಯ ದೊರಕಿಸಲು ಸಾಕಷ್ಟು ಶ್ರಮಿಸುತ್ತಿದ್ದರೂ ಬಲಿಷ್ಠರು ದಂಡು ಕಟ್ಟಿ ಪುನ: ಹಲ್ಲೆ ಮಾಡಿ, ಭೂ ಸ್ವಾಧೀನ ಮಾಡುವ ಸಂಬಂಧವಿದೆಯೆಂದೂ ತಿಳಿದುಬಂದಿದ್ದು, ಈ ವಿಚಾರದಲ್ಲಿ ಸೂಕ್ತ ತನಿಖೆ ಬೇಗ ನಡೆಸಿ ಬಡವನಿಗೆ ನ್ಯಾಯ ದೊರಕಿಸಬೇಕೆಂದೂ ದುಷ್ಟರಿಗೆ ಶಿಕ್ಷೆಯಾಗುವಂತೆ ನೋಡಬೇಕೆಂದೂ ಮತ್ತು ಮುಂದೆ. ಇಂತಹ ಕೃತ್ಯಗಳು ಜರಗದಂತೆ ರಕ್ಷಣೆ ನೀಡಬೇಕೆಂದೂ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ. ಇದನ್ನು ತಕ್ಷಣ ನಾನು ವಿಚಾರಣೆ ಮಾಡಿ ಗೇಣಿದಾರರಿಗೆ ರಕ್ಷಣೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

೧೫ ಮಾಜಿ ಗೇಣಿದಾರರಿಗೆ ಪರಿಹಾರ ಕೊಡುವುದರ ಬಗ್ಗೆ.

ಶ್ರೀ ಕೆ. ವಸಂತ ಬಂಗೇರ,—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ೧೦ ಎಕರೆವರೆಗೆ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ತೀರ್ಪಾದ ಮಾಜಿ ಗೇಣಿದಾರರಿಗೆ ಪರಿಹಾರ ಮನ್ನಾ ಮಾಡಿ ಇನ್ನೂ ಮುಂದೆ ಕಂತನ್ನು ಪಾವತಿ ಮಾಡಬೇಕಾಗಿಲ್ಲ. ಎಂದು ಮಾನ್ಯ ಮುಖ್ಯಮಂತ್ರಿಗಳು ಎರಡು ವರ್ಷಗಳ ಹಿಂದೆ ಮಾಡಿದ ಘೋಷಣೆಯ ಅರ್ಥವೇನು ? ಈ ಘೋಷಣೆ. ಘೋಷಣೆಯಾಗಿಯೇ ಉಳಿದಿದೆಯೇ ಏನು: ಕಾರ್ಯರೂಪಕ್ಕೆ ಬರದಿರಲು ಕಾರಣ ಏನು ? ಈ ವಿಚಾರದಲ್ಲಿ ಅನೇಕ ಜನ ಸದಸ್ಯರು ಹಾಗೂ ನಾನು ಕೂಡ ಸದನದಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇನೆ. ಆದರೆ ಒಂದೊಂದು ಸಲ ಒಂದೊಂದು ರೀತಿಯ ಉತ್ತರ ಬರಲು ಕಾರಣವೇನು ? ಮಾನ್ಯ ಮುಖ್ಯ ಮಂತ್ರಿಗಳ ಘೋಷಣೆಗೆ ಯಾರಾದರೂ ಅಡ್ಡಿಬರುತ್ತಿದ್ದಾರೆಯೇ ? ಮಾನ್ಯ ಮುಖ್ಯ ಮಂತ್ರಿಗಳು ಇವತ್ತಿನ ತನಕ ಆಡಿದ ಮಾತಿಗೆ ತಪ್ಪಿಲ್ಲ. ಇದರಲ್ಲೇಕೆ ತಪ್ಪಿದರು ? ಒಂದು ಸಂದರ್ಭ ಈ ಘೋಷಣೆ ಯಾಕೆ ಜಾರಿಗೆ ಬಂದಿಲ್ಲವೆಂದು ಪ್ರಶ್ನಿಸಿದಾಗ ತಾ ೧೭–೧೦–೮೪ ರಿಂದ ಪೂರ್ವಾನ್ವಯ ಆಗುವಂತೆ ತಾ ೧೬–೧೦–೮೫ ರಿಂದ ಜಾರಿಗೆ ಬಂದಿದೆ. ಮತ್ತು ತಾ ೧೭–೧೦–೮೪ ರಿಂದ ಪ್ರೀಮಿಯಂನ್ನು ಕೊಡಬೇಕಾಗಿಲ್ಲ ಎಂದು ಹೇಳಿದ್ದಾರೆ. ಇದು ಯಾವ ಪ್ರೀಮಿಯಂ ? ಪ್ರೀಮಿಯಂ ಮನ್ನಾ ಆದ ನಂತರ ಪಿ. ಎಲ್. ಡಿ. ಬ್ಯಾಂಕಿನ ಸಾಲದ ಪ್ರೀಮಿಯಂನ್ನು ರೈತನೇಕೆ ಕಟ್ಟಬೇಕು ? ಇದು ಯಾವ ನ್ಯಾಯ, ಪರಿಹಾರ ಮನ್ನಾ ಮಾಡಲು ಸರ್ಕಾರದವರು ತೆಗೆದುಕೊಂಡಂತಹ ಕ್ರಮವೇನು ಎಂದು ಕೇಳಿದರೆ ಪರಿಹಾರ ಮನ್ನಾ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಹಾಗೂ ಪ್ರೀಮಿಯಂನ್ನು ತಾ ೧೭–೧೦–೮೪ ರಿಂದ ಮನ್ನಾ ಮಾಡಲಾಗಿದೆ ಎಂದು ತಿಳಿಸುತ್ತಾರೆ. ಇದರ ಅರ್ಥವೇನು ಸ್ವಾಮಿ ? ಸಚಿವರಾದ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಕೆಲವು ದಿನಗಳ ಹಿಂದೆ ಬೆಳ್ತಂಗಡಿಯಲ್ಲಿ ಕೆ.ಡಿ.ಪಿ. ಮೀಟಿಂಗ್ ಸಂದರ್ಭದಲ್ಲಿ ತಾಲ್ಲೂಕಿನ ಎಲ್ಲಾ ಅಧಿಕಾರಿಗಳ ಸಮಕ್ಷಮ ಪಿ ಎಲ್.ಡಿ ಬ್ಯಾಂಕಿನ ಕಾರ್ಯದರ್ಶಿಯವರಿಗೆ ಈ ರೀತಿ ತಿಳಿಸಿರುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಘೋಷಣೆ ಮಾಡಿದಂತೆ ೧೦ ಎಕರೆವರೆಗೆ ಮಾಜಿಗೇಣಿದಾರನ ಪರಿಹಾರವನ್ನು ಮನ್ನಾ ಮಾಡಲಾಗಿದೆ. ಇನ್ನು ಮುಂದೆ ಪಿ.ಎಲ್.ಡಿ, ಬ್ಯಾಂಕಿನ ಕಂತಿನ ಹಣ ವಸೂಲು ಮಾಡಬಾರದು, ಅವರಿಗೆ ಆಗಿಂದಾಗ್ಗೆ ನೋಟೀಸು ಕೊಡಬಾರದು ಅಲ್ಲದೆ ಮೂರು ನೋಟೀಸು ಕೊಟ್ಟ ನಂತರ ಎ. ಆರ್. ಕೋರ್ಟಿಗೆ ಹಾಕಬಾರದು, ಸರ್ಕಾರದಿಂದ ತಕ್ಷಣ ಆಜ್ಞೆ ಬರುತ್ತದೆ ಎಂದು ತಿಳಿಸಿರುತ್ತಾರೆ. ಅವರು ತಿಳಿಸಿದಂತೆ ಕೆ.ಡಿ.ಪಿ ಮೀಟಿಂಗ್‌ನಲ್ಲಿ ಈ ರೀತಿ ಹೇಳುತ್ತಾರೆಯೇ ? ಪರಿಹಾರ ಮನ್ನಾ ಎಂದ ಮೇಲೆ ೧೦ ಎಕರೆವರೆಗಿನ ಮಾಜಿ ಗೇಣಿದಾರರು ಘೋಷಣೆಯ ನಂತರ ಪಿ.ಎಲ್.ಡಿ. ಬ್ಯಾಂಕಿನ ಹಣವನ್ನು ಪಾವತಿ

ಮಾಡಲಿಕ್ಕಿಲ್ಲವೆಂದಾದರೆ. ಆಲ್ಲದೆ ಇನ್ನು ಮುಂದೆ ಯಾವುದೇ ಪರಿಹಾರವನ್ನು ಕೊಡಬೇಕಾಗಿಲ್ಲ ಅಂದರೆ ಮಾತ್ರ ನಿಮ್ಮ ಪರಿಹಾರ ಮಾನ್ಯ ಘೋಷಣೆಗೆ ಗೌರವ ಬರುತ್ತದೆ. ಇಲ್ಲವಾದರೆ ಹಿಂದಿನ ಮುಖ್ಯ ಮಂತ್ರಿಗಳು ಕರ್ನಾಟಕ ರಾಜ್ಯದ ಎಲ್ಲಾ ಬಡರೈತರ ಸಾಲ ಮಾನ್ಯ ಎಂದು ಘೋಷಣೆ ಮಾಡಿದಂತಾಗುತ್ತದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ರೈತರಿಗೆ ವಂಚನೆ, ಅನ್ಯಾಯ, ದ್ರೋಹ ಆಗದಂತೆ ಹಾಗೂ ಕೊಟ್ಟ ಮಾತಿಗೆ ತಪ್ಪದೆ ನ್ಯಾಯ ಕಾಪಾಡುವರೆ ಸ್ಪಷ್ಟ ಉತ್ತರ ನೀಡ ಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಸಚಿವರು),—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಅನೇಕ ಸಲ ನಾನು ಈ ಮನೆಯಲ್ಲಿ ಉತ್ತರ ಕೊಟ್ಟಿದ್ದೇನೆ, ಈ ೧೦ ಎಕರೆ ಏನಿದೆ, ಅದು 'ಡಿ' ದರ್ಜೆ ಭೂಮಿಯಾಗಿದೆ. ಇದರ ಬಗ್ಗೆ ೧೭-೧೦-೮೪ ರಿಂದ ಅವರು ಪ್ರೀಮಿಯಂ ಕಟ್ಟುವುದನ್ನು ಮಾನ್ಯ ಮಾಡಿದ್ದೇವೆ. ಇದು ೧೭-೧೦-೮೪ರಿಂದ ಜಾರಿಗೆ ಬಂದಿದೆ. ಜಾರಿಗೆ ಬಂದ ಮೇಲೆ ರೈತ ಸರ್ಕಾರಕ್ಕೆ ಹಣವನ್ನು ಕಟ್ಟಬೇಕಾಗಿಲ್ಲ. ಮಾನ್ಯ ಸದಸ್ಯರು ರೈತರು ಈ ಮೊದಲೇ ಸರ್ಕಾರಕ್ಕೆ ಕಟ್ಟಿದ್ದರ ಬಗ್ಗೆ ಕೇಳುತ್ತಿದ್ದಾರೆ. ಅದು ಮಾನ್ಯ ಆಗುವುದಿಲ್ಲ. ಈ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿರ್ಣಯವಿದೆ. ಮುಂದೆ ಅವರು ಕೊಡುವ ಪ್ರೀಮಿಯಂ ಏನಿದೆ, ಅದನ್ನು ವಸೂಲು ಮಾಡಬೇಕಾಗಿದೆ ಇನ್ನು ಸುಮಾರು ೩೦ ಕೋಟಿ ರೂಪಾಯಿ ಹಣವನ್ನು ಸಣ್ಣ ರೈತರು ಕಟ್ಟಬೇಕಾಗಿರುತ್ತದೆ. ಇವತ್ತಿ ಲ್ಯಾಂಡ್ ರಿಫಾರಮ್ಸ್ ಆಕ್ಟ್‌ನಲ್ಲಿ ಇದನ್ನು ಅಳವಡಿಸಿದ್ದೇವೆ. ಇದರಲ್ಲಿ ಯಾವುದೇ ಮೋಸವಿಲ್ಲ. ಯಾವುದೇ ಭರವಸೆಯನ್ನೂ ಸರ್ಕಾರ ಕೈಬಿಟ್ಟಿಲ್ಲ. ಈ ಮಸೂದೆಗೆ ಉತ್ತರ ಹೇಳುವಾಗ ನಾನು ವಿವರವಾಗಿ ಹೇಳುತ್ತೇನೆ.

೧೬ ಪ್ರಾಥಮಿಕ ಶಾಲಾ ಶಿಕ್ಷಕರ ಜೀವ ವಿಮಾ ಹಣದ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದಲ್ಲಿ ಪ್ರಾಥಮಿಕ ಶಾಲೆಗಳ ಅಧ್ಯಾಪಕರು ಜೀವವಿಮೆಗೆ ಸೇರಿದ್ದು. ಕಂತಿನ ಹಣವನ್ನು ಆಯಾ ವಿದ್ಯಾ ಇಲಾಖೆ ಕಚೇರಿಯವರು ಸಂಬಳದಲ್ಲಿ ಕಡಿತ ಮಾಡುತ್ತಿದ್ದಾರೆ ಆ ರೀತಿ ಜೀವವಿಮೆಗೆ ಕಡಿತಮಾಡಿ ಕಟ್ಟುತ್ತಾ ಬಂದು ಮೆಚ್ಯೂರಿಟಿ ಆದರೂ ಜೀವವಿಮೆಯ ಹಣ ಸಿಕ್ಕುತ್ತಿಲ್ಲ. ಉದಾಹರಣೆಗೆ, ಬೆಂಗ್ರೆ ಸರ್ಕಾರಿ ಪ್ರಾಥಮಿಕ ಶಾಲೆಯ ಅಧ್ಯಾಪಕರಾದ ವಿಶ್ವನಾಥ ಆಳ್ವರ ಜೀವವಿಮೆ ೧೮-೧೨-೮೬ ರಂದು ಮೆಚ್ಯೂರಿಟಿ ಆಗಿದೆ ಕೇಳಿದರೆ ಹಣ ಸಿಗುತ್ತಿಲ್ಲ ಕಾರಣ ಸದರಿ ಅಧ್ಯಾಪಕರ ಸಂಬಳದಿಂದ ಪ್ರತಿಬಾರಿಯೂ ಕಡಿತಮಾಡಿದ ತಪ್ಪೆ ವರ್ಷಗಟ್ಟಲೆ ಜೀವವಿಮಾ ಆಫೀಸಿಗೆ ಮುಟ್ಟಿಸಿಲ್ಲ ಆದ್ದರಿಂದ ತೊಂದರೆಯಾಗಿದೆ ಈ ಕಾರ್ಯವನ್ನು ವಿದ್ಯಾ ಇಲಾಖೆಯವರಿಗೆ ತಿಳಿಸಿದರೂ ಸಂಬಂಧಪಟ್ಟವರು ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಅಧ್ಯಾಪಕರಿಗೆ ತುಂಬಾ ತೊಂದರೆಯಾಗಿರುತ್ತದೆ. ಈ ಕುರಿತು ಪ್ರಾಥಮಿಕ ವಿದ್ಯಾ ಖಾತೆ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ವಿದ್ಯಾಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಉಪ ನಿರ್ದೇಶಕರು ದಕ್ಷಿಣ ಕನ್ನಡ ಜಿಲ್ಲೆ, ಇವರಿಗೆ ಮೊದಲೇ ತಿಳಿಸಿದ್ದೇನೆ ಮಾಹಿತಿ ತರಿಸಿ ಕೊಂಡು ಕೂಡಲೇ ಈ ಬಗ್ಗೆ ಸೂಕ್ತವಾದ ವ್ಯವಸ್ಥೆ ಮಾಡುತ್ತೇನೆ.

೧೭ ಮಂಡಿಕೇರಿ ಸೆಂಟ್ರಲ್ ಜೈಲಿನಿಂದ ಖೈದಿಗಳು ತಪ್ಪಿಸಿಕೊಂಡಿರುವ ಬಗ್ಗೆ

ಶ್ರೀ ಡಿ. ಎ ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ, ಮಡಿಕೇರಿ ಸೆಂಟ್ರಲ್ ಜೈಲಿನಿಂದ ಬುಧವಾರ ಆರು ಮಂದಿ ಖೈದಿಗಳು ತಪ್ಪಿಸಿಕೊಂಡ ಹಿನ್ನೆಲೆಯಲ್ಲಿ ಕರ್ತವ್ಯವನ್ನು ನಿರ್ಲಕ್ಷಿಸಿದ ಆರೋಪದ ಮೇಲೆ ಮುಖ್ಯ ವಾರ್ಡರ್ ಹಾಗೂ ಮತ್ತೊಬ್ಬ ವಾರ್ಡರ್ ಅವರುಗಳನ್ನು ಅಮಾನತ್ತಿನಲ್ಲಿ ಇಡಲಾಗಿದೆಯೆಂದು ತಿಳಿದು ಬಂದಿದೆ. ಮೇಲ್ಕಂಡ ಖೈದಿಗಳು ಕುಖ್ಯಾತ ಖೈದಿಗಳಾಗಿದ್ದು ಸೂಕ್ತ ಬಂದೋಬಸ್ತು ಮಾಡಬೇಕೆಂದು ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ ಅವರು ಜೈಲು ಸೂಪರಿಂಟೆಂಡೆಂಟ್‌ರವರಿಗೆ ಆದೇಶ ನೀಡಿದ್ದಾಗ್ಯೂ ಸೂಕ್ತ ಬಂದೋಬಸ್ತ್ ಮಾಡದೆ ಅವರು ಕರ್ತವ್ಯ ಚ್ಯುತರಾಗಿದ್ದಾರೆಂದೂ ತಿಳಿದುಬಂದಿದೆ. ಆಲ್ಲದೇ ಅವರು ತಪ್ಪಿಸಿಕೊಂಡ ದಿನ ಖೈದಿಗಳಲ್ಲೊಬ್ಬನಿಂದ ಆರು ಮಂದಿ ಜೈಲು ವಾರ್ಡರುಗಳು ಹಣ ಪಡೆದಿರುವುದಾಗಿಯೂ ಆಲ್ಲಲ್ಲಿ ವಾತಾ ನಡೆಯುತ್ತಿದ್ದ ಖೈದಿಗಳು ಜೈಲಿನ ಮುಖ್ಯ ಗೇಟಿನಿಂದಲೇ ತಪ್ಪಿಸಿಕೊಂಡು ಹೋಗಿರುವುದಾಗಿಯೂ ಜನ ಮಾತನಾಡಿ ಕೊಳ್ಳುತ್ತಲ್ಲಿದ್ದಾರೆ. ಹಾಗೂ ಖೈದಿಗ